ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 66 ಸೇಲೋಯು 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:29.01.2018.

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ಬೆಂಗಳೂರು.

19273/17-18
2/2/18

**ಇವರಿಗೆ:**
ನಿಬಂಧಕರು,
ಕರ್ನಾಟಕ ಲೋಕಾಯುಕ್ತ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-01.

ಮಾನ್ಯರೆ,

ವಿಷಯ: ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಲೋಕ್/ಇಎಸ್‌ಟಿ-1/23/2016-17, ದಿ:30.03.2017, ದಿ:29.05.2017 ಹಾಗೂ ದಿ:28.11.2017.

D. R. A.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಕಾನೂನು ಪದವಿಯನ್ನು ಹೊಂದಿರುವ 3 ಸಂಶೋಧನಾ ಸಹಾಯಕರನ್ನು ರೂ.22,000/-ಗಳ ಸಂಚಿತ ವೇತನದೊಂದಿಗೆ ಮೂರು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪಡೆಯಲು ಸರ್ಕಾರವು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿಸಿದೆಯೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ:-

1) ಸಂಶೋಧನಾ ಸಹಾಯಕರಾಗಿ ತೆಗೆದುಕೊಂಡ ವ್ಯಕ್ತಿಯ ಸೇವೆಯನ್ನು ಪಡೆಯಲು ಪ್ರತಿ ವರ್ಷ ಕೆ.ಟಿ.ಪಿ.ಪಿ. ಕಾಯ್ದೆಯ ಕಲಂ 4(ಜಿ)ರನ್ವಯ ವಿನಾಯಿತಿ ಪಡೆದುಕೊಳ್ಳಬೇಕಾಗುತ್ತದೆ. ಅದರನ್ವಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
2) 03 ಸಂಶೋಧನಾ ಸಹಾಯಕರನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಬದಲಾಯಿಸುವುದು ಸೂಕ್ತ ಹಾಗೂ ಈ ಸ್ಥಾನವನ್ನು ಶಾಶ್ವತಗೊಳಿಸಲು ಅವಕಾಶವಿರುವುದಿಲ್ಲ.
3) ಹೊಸದಾಗಿ ಉತ್ತೀರ್ಣರಾದ ಪದವೀಧರರುಗಳನ್ನು Apprentice ಆಗಿ ತೆಗೆದುಕೊಂಡು ಅವರ ವೃತ್ತಿ ಜೀವನ ಬೆಳೆಸಲು ಮಾತ್ರ ಅವಕಾಶ ಮಾಡಿಕೊಡುವುದರಿಂದ ಸಂಸ್ಥೆಗೆ ಸೇವೆಯ ಉಪಲಬ್ಧತೆಯಿರುತ್ತದೆ.

ತಮ್ಮ ನಂಬುಗೆಯ,

(ಹೇಮಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಸಿ.ಆ.ಸು.ಇಲಾಖೆ (ಜಾಗೃತ ವಿಭಾಗ).